# ದೇವರಿಗಾಗಿ ವ್ಯಾಕುಲತೆ



❁ ಯಾವ ರೀತಿ ಮಗು ತನ್ನ ತಾಯಿಯನ್ನು ಕಾಣದೆ ದಿಗ್ಭ್ರಮೆಗೊಂಡು, ಅದರ ಬಾಯಿಗೆ ಸಂದೇಶ, ಮಿಠಾಯಿ ಯಾವುದು ಹಾಕಿದರೂ ಅದೊಂದೂ ಅದಕ್ಕೆ ಬೇಡವಾಗಿ ಏನು ಮಾಡಿದರೂ ತಾಯಿಯನ್ನು ಮರೆಯದೆ ಹೇಳುತ್ತದೆಯೊ, 'ಒಂದೂ ಬೇಡ, ನಾನು ತಾಯ ಹತ್ತಿರ ಹೋಗಬೇಕು' ಅಂತ, ಅದೇ ರೀತಿಯಾಗಿ ಭಗವಂತನಿಗಾಗಿ ಮನುಷ್ಯ ವ್ಯಾಕುಲಪಡಬೇಕು. ಆಹಾ! ಎಂಥ ಅವಸ್ಥೆ! ಮಗು ತನ್ನ ತಾಯಿಗಾಗಿ ಎಷ್ಟೊಂದು ವ್ಯಾಕುಲಪಡುತ್ತದೆ! ಯಾವುದರಿಂದಲೂ ಅದು ತನ್ನ ತಾಯಿಯನ್ನು ಮರೆಯದು. ಯಾರಿಗೆ ಈ ಜಗತ್ತಿನ ಸುಖೋಪಭೋಗಗಳೂ ರುಚಿಸವೊ, ಯಾರಿಗೆ ಬೇರೆ ಯಾವುವೂ ಬೇಕಾಗಿಲ್ಲವೊ, ಹಣ, ಹೆಸರು, ದೇಹಸುಖ, ಇಂದ್ರಿಯಸುಖ ಇವು ಯಾವುವೂ ಹಿಡಿಸವೊ, — ಆತ ಹೃತ್ಪೂರ್ವಕವಾಗಿಯೂ ಭಗವಂತನ ದರ್ಶನಕ್ಕಾಗಿ ಅತ್ಯಂತ ಕಾತರನಾಗುತ್ತಾನೆ. ಅಂಥವರಿಗಾಗಿಯೇ ಭಗವತಿ ತನ್ನ ಎಲ್ಲಾ ಕೆಲಸಗಳನ್ನು ಬಿಟ್ಟು ಓಡಿಬರಬೇಕಾಗುತ್ತದೆ.

❁ ವ್ಯಾಕುಲತೆಯೇ ಸರ್ವಸ್ವ. ಯಾವ ಮಾರ್ಗದಲ್ಲಾದರೂ ಹೋಗು — ನೀನು ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್, ಶಾಕ್ತ, ಬ್ರಾಹ್ಮ ಯಾವುದು ಬೇಕಾದರೂ ಆಗಿರು — ಆವಶ್ಯಕವಾಗಿ ಬೇಕಾಗಿರುವುದು ವ್ಯಾಕುಲತೆ. ಆತ ನಮ್ಮ ಅಂತರ್ಯಾಮಿ. ವ್ಯಾಕುಲತೆಯೊಂದಿದ್ದರೆ ನಾವು ತಪ್ಪು ದಾರಿ ಹಿಡಿದಿದ್ದರೂ ಚಿಂತೆಯಿಲ್ಲ , ಆತ ಮತ್ತೆ ನಮ್ಮನ್ನು ಒಳ್ಳೇ ಮಾರ್ಗಕ್ಕೆ ತಂದು ಸೇರಿಸಿಬಿಡುತ್ತಾನೆ.

❁ ವ್ಯಾಕುಲತೆ ಬೇಕು, ಯಾವ ರೀತಿಯಾಗಿ ಮಗು ತಾಯಿಯನ್ನು ಕಾಣದೆ ದಿಗ್ಭ್ರಮೆಗೊಂಡು ಆಕೆಗಾಗಿ ಅಳುವುದೊ, ಅದೇ ರೀತಿಯಾಗಿ ವ್ಯಾಕುಲನಾಗಿ ಭಗವಂತನಿಗಾಗಿ ಅತ್ತರೆ ಆಗ ಭಗವಂತ ಕೂಡ ದೊರೆತುಬಿಡುತ್ತಾನೆ.

❁ ಅರುಣೋದಯವಾದರೆ ಪೂರ್ವ ಹೊಂಬಣ್ಣವಾಗುತ್ತದೆ. ಆಗ ಗೊತ್ತಾಗುತ್ತದೆ, ಸೂರ್ಯೋದಯಕ್ಕೆ ಇನ್ನು ಹೆಚ್ಚು ಹೊತ್ತು ಇಲ್ಲ. ಅದೇ ರೀತಿ ಯಾರಲ್ಲಿಯೇ ಆಗಲಿ ಭಗವಂತನಿಗಾಗಿ ಅತ್ಯಂತ ಅಗಾಧವಾದ ವ್ಯಾಕುಲತೆ ಉಂಟಾಗಿರುವುದು ಕಂಡುಬಂದರೆ, ಆಗ ಚೆನ್ನಾಗಿ ಗೊತ್ತಾಗುತ್ತದೆ ಆ ವ್ಯಕ್ತಿ ಸಾಕ್ಷಾತ್ಕಾರಕ್ಕಾಗಿ ಇನ್ನು ಹೆಚ್ಚು ಕಾಲ ಕಾದಿರಬೇಕಾಗಿಲ್ಲ ಅಂತ.

❁ ಒಬ್ಬ ಶಿಷ್ಯ ಗುರುವನ್ನು ಕೇಳಿದ, 'ಪೂಜ್ಯರೆ. ದಯವಿಟ್ಟು ಹೇಳಿ, ಭಗವಂತನನ್ನು ಪಡೆಯುವುದು ಹೇಗೆ?' ಗುರು ಹೇಳಿದ, 'ಬಾ ನನ್ನೊಡನೆ, ನಿನಗೆ ತೋರಿಸಿಕೊಡುತ್ತೇನೆ.' ಹೀಗೆಂದು ಹೇಳಿ ಗುರು ಆತನನ್ನು ಸಂಗಡ ಕರೆದುಕೊಂಡು ಒಂದು ಕೆರೆಯ ಹತ್ತಿರಕ್ಕೆ ಹೋದ. ಇಬ್ಬರೂ ನೀರಿಗೆ ಇಳಿದರು. ಬಳಿಕ ಗುರು ಇದ್ದಕ್ಕಿದ್ದ ಹಾಗೆ ಶಿಷ್ಯನನ್ನು ನೀರಿನೊಳಕ್ಕೆ ಮುಳುಗಿಸಿ ಅದುಮಿ ಹಿಡಿದ. ಒಂದು ಸ್ವಲ್ಪ ಹೊತ್ತಿನ ನಂತರ ಆತನನ್ನು ಬಿಟ್ಟುಬಿಡಲಾಗಿ ಶಿಷ್ಯ ನೀರಿನಿಂದ ಮೇಲಕ್ಕೆ ಎದ್ದುಬಂದು ನಿಂತ. ಆಗ ಗುರು ಕೇಳಿದ, 'ನೀರಿನೊಳಗಿದ್ದಾಗ ನಿನಗೇನನ್ನಿಸುತ್ತಿತ್ತು?' ಶಿಷ್ಯ ಹೇಳಿದ, 'ಪ್ರಾಣ ಹೋಗುವುದರಲ್ಲಿತ್ತು; ಒಂದು ಗುಟುಕು ಉಸಿರಿಗಾಗಿ ಪ್ರಾಣ ಸುಮ್ಮನೆ ಒದ್ದಾಡುತ್ತಿತ್ತು.' ಆಗ ಗುರು ಹೇಳಿದ: 'ಯಾವಾಗ ನಿನ್ನ ಪ್ರಾಣ ಈ ರೀತಿ ಭಗವಂತನಿಗಾಗಿ ವ್ಯಾಕುಲಪಡುವುದೊ ಆಗ ತಿಳಿದುಕೊ – ನೀನು ಹೆಚ್ಚುಕಾಲ ಆತನ ದರ್ಶನಕ್ಕಾಗಿ ಕಾಯಬೇಕಾಗಿಲ್ಲ ಅಂತ.'

❁ ಸುಮ್ಮನೆ ಮೇಲೆಯೇ ತೇಲಿದರೆ ಏನು ದೊರೆಯುತ್ತದೆ? ಒಂದು ಸ್ವಲ್ಪ ಮುಳುಗು. ರತ್ನಗಳು ಬಹಳ ಆಳದಲ್ಲಿ ಬಿದ್ದಿವೆ. ನೀರಿನ ಮೇಲೆ ಕೈಕಾಲು ಹೊಡೆದರೆ ಏನಾಗುತ್ತದೆ? ಮಾಣಿಕ್ಯ ವಾಸ್ತವಿಕವಾಗಿ ಬಹಳ ಭಾರವಾದದ್ದು; ಅದು ನೀರಿನ ಮೇಲೆ ತೇಲದು; ಅದು ಮುಳುಗಿ ತಳಕ್ಕೆ ಹೋಗಿ ಕುಳಿತುಕೊಳ್ಳುತ್ತದೆ. ನಿನಗೆ ನಿಜವಾದ ರತ್ನ ಬೇಕಾಗಿದ್ದರೆ ನೀರಿನ ಆಳಕ್ಕೆ ಮುಳುಗಬೇಕು.

❁ ಆತನ ಸ್ಮರಣೆಮಾಡಿದರೆ ಸಕಲ ಪಾಪಗಳೂ ಭಸ್ಮವಾಗಿ ಹೋಗುತ್ತದೆ. ಮುಳುಗು ಹಾಕಲೇಬೇಕು. ಇಲ್ಲದಿದ್ದರೆ ರತ್ನ ದೊರೆಯದು. ಕೆಲಕೆಲವರಿಗೆ, ಮುಳುಗಲು ಇಚ್ಛೆ ಇಲ್ಲ. ಅವರು ಹೇಳುತ್ತಾರೆ: 'ಭಗವಂತ, ಭಗವಂತ ಅಂತ ತಲೆ ಚಚ್ಚಿಕೊಂಡು ಕೊನೆಗೆ ಹುಚ್ಚರಾಗಿ ಬಿಡೋಣವೇನು?' ಯಾರು ಭಗವಂತನ ಪ್ರೇಮದಿಂದ ಮತ್ತರಾಗಿದ್ದಾರೊ ಅವರ ಸಂಬಂಧವಾಗಿ ಅವರು 'ಇವರಿಗೆ ತಲೆ ಕೆಟ್ಟುಹೋಗಿದೆ' ಅಂತ ಹೇಳುತ್ತಾರೆ. ಆದರೆ ಈ ಜನರಿಗೆ ಗೊತ್ತಾಗದು; ಸಚ್ಚಿದಾನಂದ ಅಮೃತಸಾಗರ ಎಂಬುದು. ನಾನು ಒಮ್ಮೆ ನರೇಂದ್ರನನ್ನು ಕೇಳಿದೆ, 'ಒಂದು ಬಟ್ಟಲ ತುಂಬ ಸಕ್ಕರೆಪಾನಕ ಇದೆ, ನೀನು ಒಂದು ನೊಣ ಆಗಿದ್ದೀಯೆ ಅಂತ. ನೀನು ಎಲ್ಲಿ ಕುಳಿತು ಪಾನಕ ಕುಡಿಯುವೆ ಹೇಳು ನೋಡೋಣ?' ನರೇಂದ್ರ, 'ಬಟ್ಟಲ ಅಂಚಿನಲ್ಲಿ ಕುಳಿತು ಮುಖವನ್ನು ಮುಂದಕ್ಕೆ ಚಾಚಿ ಕುಡಿಯುತ್ತೇನೆ' ಅಂತ ಹೇಳಿದ. ನಾನು, 'ಹಾಗೇಕೆ ಮಾಡಬೇಕು? ಅದರ ಮಧ್ಯಕ್ಕೆ ಮುಳುಗಿ ಕುಡಿದರೆ ತಪ್ಪೇನು?' ಅಂತ ಕೇಳಿದೆ. ಆತ ಹೇಳಿದ, 'ಆಗ ಆ ಪಾನಕದಲ್ಲಿ ಸಿಕ್ಕಿಕೊಂಡುಬಿಟ್ಟು ಸತ್ತುಹೋಗಿಬಿಡುತ್ತೇನೆ' ಎಂದು ಹೇಳಿದ. ಅದಕ್ಕೆ ನಾನು ಹೇಳಿದೆ. 'ಮಗು, ಸಚ್ಚಿದಾನಂದ ಪಾನಕ ಅಂಥದೇನಲ್ಲ , ಅದು ಅಮೃತದ ಪಾನಕ. ಅದರಲ್ಲಿ ಮುಳುಗಿದರೆ ಮನುಷ್ಯ ಸಾಯುವುದಿಲ್ಲ , ಅಮರನಾಗಿಬಿಡುತ್ತಾನೆ.

ಶ್ರೀರಾಮಕೃಷ್ಣ ವಚನವೇದದಿಂದ